(7) ನಿಯಮ 69ರ ಮೇರೆಗೆ ಅಲ್ಪ ಕಾಲಾವಧಿ ಚರ್ಚೆ

ವಿಷಯ:- ಹುಕ್ಕೇರಿ ತಾಲ್ಲೂಕು ಸಹಕಾರಿ ಗ್ರಾಮೀಣ ವಿದ್ಯುತ್ ಸಂಘವನ್ನು ಬಂದ್ ಮಾಡುವ ಪ್ರಸ್ತಾಪ.

ಶ್ರೀ ಎ.ಬಿ. ಪಾಟೀಲ್(ಸಂಕೇಶ್ವರ):- ಮಾನ್ಯ ಉಪಾಧ್ಯಕ್ಷರೇ, ಹುಕ್ಕೇರಿ ತಾಲ್ಲೂಕು ಸಹಕಾರಿ ಗ್ರಾಮೀಣ ವಿದ್ಯುತ್ ಸಂಘ ನಿಯಮಿತ, ಹುಕ್ಕೇರಿ, ಇದು 1970ರಲ್ಲಿ ಪ್ರಾರಂಭವಾಯಿತು. ಕೇಂದ್ರ ಸರ್ಕಾರದ ಆರ್.ಇ.ಸಿ. ಯೋಜನೆಯ ಅಡಿಯಲ್ಲಿ ಇದು ಪ್ರಾರಂಭವಾಗಿ ಸುಮಾರು ವರ್ಷಗಳಾಯಿತು. ಇಡೀ ರಾಷ್ಟ್ರದಲ್ಲಿ ಇಂತಹ ಸಹಕಾರ ಸಂಸ್ಥೆ ಇದೊಂದೇ. ವಿದ್ಯುತ್ ಅನ್ನು ಕೆ.ಇ.ಬಿ. ಯಿಂದ ಪರ್ಚೇಸ್ ಮಾಡಿ, ಇಡೀ ಗ್ರಾಮೀಣ ಭಾಗದಲ್ಲಿ ವಿದ್ಯುತ್‌ಅನ್ನು ಪೂರೈಕೆ ಮಾಡತಕ್ಕ ಕೆಲಸವನ್ನು ಸಂಘ ಮಾಡುತ್ತಿದೆ. ಆದರೆ ಕೆ.ಇ.ಬಿ. ಯವರು ಈ ಸಂಘವನ್ನು ಬಂದ್ ಮಾಡಬೇಕೆಂಬ ದುರುದ್ದೇಶ ವನ್ನಿಟ್ಟುಕೊಂಡು ಈ ಸಂಘಕ್ಕೆ ತುಂಬಾ ತೊಂದರೆ ಕೂಡ ಕೊಡುತ್ತಿದ್ದಾರೆ.

5.40 ಪಿ. ಎಂ.

ಹೋದವರ್ಷ ಶ್ರೀ ಜೆ.ಹೆಚ್. ಪಟೇಲರು ಉಪ ಮುಖ್ಯಮಂತ್ರಿಗಳಾಗಿದ್ದಾಗ ಕೆ.ಇ.ಬಿ. ಅಧಿಕಾರಿಗಳನ್ನು ಕರೆದು ಒಂದು ಸಭೆ ಮಾಡಿ ಈ ಸೊಸೈಟಿಯ 18 ಕೋಟಿ ರೂಪಾಯಿಗಳು ಇರತಕ್ಕಂತಹ ಬಾಕಿಯನ್ನು ಕೂಡ ಸರಿಯಾದ ರೀತಿಯಲ್ಲಿ ಪರಿಶೀಲಿಸಿ ಯೋಗ್ಯ ಕ್ರಮ ತೆಗೆದುಕೊಂಡಿದ್ದಾರೆ. ಆದರೆ ಇವತ್ತು ಏನಾಗಿದೆ, ಆ ಆರ್.ಡಿ.ಪಿ.ಆರ್ ಡಿಪಾರ್ಟ್‌ಮೆಂಟ್‌ನಿಂದ ಮತ್ತು ಹೆಚ್.ಯು.ಡಿ. ನಿಂದ ಕೆ.ಇ.ಬಿ. ಗೆ ಯಾವ ರೀತಿ ಹಣ ಕೊಡುತ್ತಿದ್ದಾರೆ? ಕೆ.ಇ.ಬಿ. ಬಿಲ್‌ಗಳನ್ನು ಈ ಸಂಘಕ್ಕೆ ಕೊಡುತ್ತಿಲ್ಲ. ಅದು 60 ಲಕ್ಷ ರೂಪಾಯಿಗಳವರೆಗೆ ಇವತ್ತು ಬಾಕಿ ಇದೆ. ಪೌರಾಡಳಿತ ಇಲಾಖೆಯಿಂದ ಬರಬೇಕಾಗಿದೆ ಮತ್ತು ಆರ್.ಡಿ.ಪಿ.ಆರ್ ಇಲಾಖೆಯಿಂದ ಕೂಡ ಬರಬೇಕಾಗಿದೆ. ಅದನ್ನು ಕೂಡ ಕೊಡದೆ ಇರುವುದರಿಂದ ಈ ಸೊಸೈಟಿ ಬಹಳ ತೊಂದರೆಗೆ ಈಡಾಗಿದೆ. ಅದೂ ಅಲ್ಲದೆ ಉಳಿದ ತಾಲ್ಲೂಕುಗಳ ಒಂದು ತುಲನಾತ್ಮಕ ವರದಿಯನ್ನು ನೋಡಿದಾಗ ಸುಮಾರು ವರ್ಷಗಳಿಂದ ನಮ್ಮ ಈ ಹುಕ್ಕೇರಿ ಗ್ರಾಮಕ್ಕೆ ಕೇವಲ 30 ವಿತರಣಾ ಕೇಂದ್ರಗಳನ್ನು ಕೊಟ್ಟಿದ್ದಾರೆ. ಆದರೆ ರಾಯಭಾಗಕ್ಕೆ ಆರು, ಅಥಣಿಗೆ 10 ಮತ್ತು ಚಿಕ್ಕೋಡಿಗೆ 9 ಕೇಂದ್ರಗಳನ್ನು ಕೊಟ್ಟಿದ್ದಾರೆ. ನಮ್ಮಲ್ಲಿ ಸಾಮರ್ಥ್ಯ ಇರುವುದು ಕೇವಲ 20 ಮೆ. ವ್ಯಾ. ಆದರೆ ರಾಯಭಾಗಕ್ಕೆ 55 ಮೆ. ವ್ಯಾ ಅಥಣಿಗೆ 75 ಮತ್ತು ಚಿಕ್ಕೋಡಿಗೆ 70 ಮೆ. ವ್ಯಾ ಈ ರೀತಿ ತುಲನಾತ್ಮಕ ಮಾಡಿರುವುದು ನೋಡಿದರೆ ನಮ್ಮ ಸಂಘಕ್ಕೆ ಪ್ರತಿ ವರ್ಷಕ್ಕೆ 3.25 ಲಕ್ಷ ರೂಪಾಯಿಗಳ ಆದಾಯ ಇದೆ. ಆದರೆ ಉಳಿದ ತಾಲ್ಲೂಕುಗಳನ್ನು ನೋಡಿದರೂ ಕೂಡ ಇವತ್ತು ಒಂದು ಕೋಟಿ 37 ಲಕ್ಷ ರೂಪಾಯಿ ಇದೆ. ಈ ಸಂಘ ಇವತ್ತು ಸಹಕಾರ ತತ್ವದ ಮೇಲೆ ವಿಶ್ವಾಸ ಇಟ್ಟು ಇಡೀ ರಾಜ್ಯದಲ್ಲಿ ಅಲ್ಲ, ಇಡೀ ರಾಷ್ಟ್ರದಲ್ಲಿ ಒಳ್ಳೆಯ ರೀತಿ ಕೆಲಸ ಮಾಡುತ್ತಿದೆ. ಒಂದೇ ವರ್ಷದಲ್ಲಿ 1.93 ಲಕ್ಷ ರೂಪಾಯಿಗಳನ್ನು ನಾವು ನಿವ್ವಳ ಲಾಭ ಮಾಡಿದ್ದೇವೆ. ಈ ದೃಷ್ಟಿಯಿಂದ

ಕೆ.ಇ.ಬಿ.ಯವರೂ ಕೂಡ ಇವತ್ತು ಇದನ್ನು ಬಂದ್ ಮಾಡಬೇಕು ಎಂಬ ದುರುದ್ದೇಶ ಹೊಂದಿದ್ದಾರೆ. ಅವರು ಸರಿಯಾದ ರೀತಿಯಲ್ಲಿ ಸಹಕಾರ ಕೊಡುತ್ತಿಲ್ಲ. ಯಾವ ರೀತಿ ಹೆಚ್ಚಿಗೆ ಕೇಂದ್ರಗಳನ್ನು ಕೂಡ ಸ್ಥಾಪನೆ ಮಾಡಬೇಕು. ಅದಲ್ಲದೆ ಕೋಲ್ ಕೂಡ ಇವತ್ತು ಮ್ಯಾನುಫ್ಯಾಕ್ಚರ್ ಮಾಡುತ್ತಿದ್ದೇವೆ. ನಮ್ಮ ಕೋಲ್ ಮ್ಯಾನುಫ್ಯಾಕ್ಚರ್ ಇವತ್ತು 750 ರೂಪಾಯಿಗೆ ಕೆ.ಇ.ಬಿ. ಯವರು ಪರ್ಚೇಸ್ ಮಾಡುತ್ತಿದ್ದಾರೆ. ಆದರೆ ನಾವು ಮಾರುವುದು ಇವತ್ತು ಕೇವಲ 350 ರೂ. ಗಳು. ಆ ದೃಷ್ಟಿಯಿಂದ ಕೂಡ ಪೌರಾಡಳಿತ ಮಂತ್ರಿಗಳು ಅದಲ್ಲದೆ ಅರ್ಬನ್ ಅಂಡ್ ರೂರಲ್ ಡೆವಲಪ್‌ಮೆಂಟ್ ಮಂತ್ರಿಗಳು ನಮಗೆ ಬರಬೇಕಾದ ಬಾಕಿಯನ್ನು ಕೊಡಿಸಬೇಕು. ಅದಲ್ಲದೆ ಕೇಂದ್ರಗಳನ್ನು ಹೆಚ್ಚಿನ ರೀತಿಯಲ್ಲಿ ಮಾಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್:- ಸನ್ಮಾನ್ಯ ಉಪಾಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಹೇಳುವುದು ಏನು ಸೊಸೈಟಿಗೆ ಕೆ.ಇ.ಬಿ.ಯಿಂದ ಇಷ್ಟು ಕಾರ್ಪೊರೇಷನ್ ದುಡ್ಡು ಬಾಕಿ ಇದೆ, ಆ ಬಾಕಿ ದುಡ್ಡು ಏನಿದೆ ಅದನ್ನು ನಾವು ಸೊಸೈಟಿಗೆ ಕೊಡಬೇಕು. ಪ್ರತಿ ತಿಂಗಳು ಅಕ್ಕ್ಟ್ರಾಯ್ ಗ್ರ್ಯಾಂಟ್ ರಿಲೀಸ್ ಮಾಡುತ್ತೇವೆ ಅದರಲ್ಲಿ ಕೆ.ಇ.ಬಿ.ಯ ಮತ್ತು ಸರ್ಕಾರದ ಯಾವ ಯಾವ ಡ್ಯೂಸ್ ಇದೆ ಅದನ್ನು ಡಿಡಕ್ಷನ್ ಮಾಡಿ ನಾವು ಕಳುಹಿಸುತ್ತಿದ್ದೇವೆ. ಅವರ ಸೊಸೈಟಿಗೆ ಯಾರು ಯಾರು ಅಧಿಕಾರಿಗಳು ಕನ್‌ಸರ್ನ್ಡ್ ಇದ್ದಾರೆ ಅವರಿಗೆ ಸೂಚಿಸುತ್ತೇವೆಂದು ಆಶ್ವಾಸನೆ ಕೊಡುತ್ತೇನೆ.

ಶ್ರೀ ಎ.ಬಿ. ಪಾಟೀಲ್:- ಬೇಗನೆ ಕೊಡಿಸುವ ವ್ಯವಸ್ಥೆ ಮಾಡಬೇಕು.

ಶ್ರೀ ಮಿರಾಜುದ್ದೀನ್ ಎನ್. ಪಾಟೀಲ್:- ಟೋಟಲ್ ಒಂದೇ ಸಾರಿ ಡಿಡಕ್ಷನ್ ಮಾಡಿ ಕೊಡಬೇಕಾದರೆ ಕಾರ್ಪೊರೇಷನ್, ಮುನಿಸಿಪಾಲಿಟಿ ನಡೆಯುವ ಹಾಗೆ ಇಲ್ಲ. ಇದು ಎಷ್ಟು ಆಗುತ್ತದೆ ಅಷ್ಟು ಡಿಡಕ್ಷನ್ ಮಾಡಿ ನಾವು ಕೊಡುತ್ತೇವೆ.

ಶ್ರೀ ಸೈಯದ್ ಜುಲ್ಫಿಕಾರ್ ಹಾಶ್ಮಿ:- ತಾವು ಪರ್ಮಿಷನ್ ಕೊಟ್ಟಿದ್ದೀರಿ.

ಉಪ ಸಭಾಧ್ಯಕ್ಷರು:- ಅವರು ವಿಷಯದ ಬಗ್ಗೆ ಉತ್ತರ ಕೊಡುತ್ತಿದ್ದಾರೆ, ನೀವು ನಿಂತರೆ ಹೇಗೆ? ಶ್ರೀರಾಮರೆಡ್ಡಿಯವರು ನಿಲುವಳಿ ಸೂಚನೆ ಕಳುಹಿಸಿದ್ದಾರೆ, ಅದನ್ನು ನಿಯಮ 69ರ ಅಡಿಯಲ್ಲಿ ಪ್ರಸ್ತಾಪ ಮಾಡಬೇಕು.

ಶ್ರೀ ಸೈಯದ್ ಜುಲ್ಫಿಕಾರ್ ಹಶ್ಮಿ:- ನಮ್ಮದು ಬಹಳ ಸೆನ್ಸಿಟೀವ್ ಇಷ್ಯು ಇದೆ. ನಮ್ಮ ಇಡೀ ಕರ್ನಾಟಕದ ಸಮಾಜಕ್ಕೆ ದ್ರೋಹ ಆಗುತ್ತಿದೆ.